# HUBBALLI-DHARWAD SMART CITY LIMITED

Special Purpose Vehicle for Implementation of Smart City Projects
(Registered Company No. CIN:U74999KA2017 PLC 101265)

# ಹಳೇ-ಹುಬ್ಬಳ್ಳಿ ತರಕಾರಿ ಮಾರುಕಟ್ಟೆ ಅಭಿವೃದ್ಧಿ ಯೋಜನೆ

## ವ್ಯಾಪಾರಸ್ಥರಲ್ಲಿ ಮನವಿ

ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಯೋಜನೆಯಲ್ಲಿ ಹಳೇ-ಹುಬ್ಬಳ್ಳಿಯ ತರಕಾರಿ ಮಾರುಕಟ್ಟೆಯನ್ನು ಮತ್ತು ವಲಯ ಕಚೇರಿ ಕಟ್ಟಡದ ಪ್ರದೇಶವನ್ನು ನೂತನ ವಿನ್ಯಾಸದೊಂದಿಗೆ ಅಭಿವೃದ್ಧಿಪಡಿಸಲಾಗುತ್ತಿದೆ. ಸದರಿ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಸುಸಜ್ಜಿತ ತರಕಾರಿ ಮಾರುಕಟ್ಟೆ ಹಾಗೂ ವಲಯ ಕಚೇರಿಯ ಕಟ್ಟಡವನ್ನು ಮರು ವಿನ್ಯಾಸದೊಂದಿಗೆ ವ್ಯವಸ್ಥಿತವಾಗಿ ನಿರ್ಮಾಣ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

- ಕೆಳಮಹಡಿಯಲ್ಲಿ ವಾಹನ ನಿಲುಗಡೆ. ನೆಲ ಮಹಡಿಯಲ್ಲಿ ವ್ಯಾಪಾರ ಮಳಿಗೆಗಳು ಹಾಗೂ ಮೊದಲನೆ ಮಹಡಿಯಲ್ಲಿ ವಲಯ ಕಚೇರಿ ಮತ್ತು ಗ್ರಂಥಾಲಯ ಹಾಗೂ ಇತರ ಕಚೇರಿಗಳಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.
- ಎರಡನೇ ಮಹಡಿಯಲ್ಲಿ ವಿಶಾಲವಾದ ಸುಸಜ್ಜಿತ ಸ್ಥಳಾವಕಾಶ ಮತ್ತು ಮೂರನೆ ಮಹಡಿಯಲ್ಲಿ ತೆರೆದ ಮೇಲ್ಛಾವಣಿ, ಸದರಿ ಮೇಲ್ಛಾವಣಿಯಲ್ಲಿ ಉಪಹಾರ ಗೃಹ ಮತ್ತು ಮನೋರಂಜನೆ ಚಟುವಟಿಕೆಗಳಿಗೆ ಸ್ಥಳಾವಕಾಶ ಒದಗಿಸಿ ಕಟ್ಟಡ ನಿರ್ಮಿಸಲಾಗುತ್ತಿದೆ.

| Proposed Building at Old Hubballi Market Redevelopment | |
|---|---|
| Total Site area | 21129 sq feet |
| Total Number of floors | 2B+G+4F+Terrace floor |
| Total Built - up | 86,178 sq feet |






- ಕೆಳಮಹಡಿಯಲ್ಲಿ ಸಾರ್ವಜನಿಕರ ಮತ್ತು ವ್ಯಾಪಾಸ್ಥರ ವಾಹನಗಳಿಗೆ ಸ್ಮಾರ್ಟ ಪಾರ್ಕಿಂಗ್ ವ್ಯವಸ್ಥೆಗೆ ಸ್ಥಳಾವಕಾಶ
- ನೆಲ ಮಹಡಿಯಲ್ಲಿ ವ್ಯಾಪಾರಸ್ಥರಿಗೆ ಮಳಿಗೆಗಳು
- ಸಾರ್ವಜನಿಕರಿಗೆ ವ್ಯಾಪಾರಕ್ಕಾಗಿ ಅನುಕೂಲವಾಗುವಂತೆ ಮುಕ್ತವಾದ ಚಲನವಲನಕ್ಕೆ ಅನುಕೂಲ






- ಮೊದಲನೆ ಮಹಡಿಯಲ್ಲಿ ವಲಯ ಕಚೇರಿ ಮತ್ತು ಗ್ರಂಥಾಲಯ ಹಾಗೂ ಇತರ ಕಚೇರಿಗಳಿಗೆ ವಿಶಾಲವಾದ ಸ್ಥಳಾವಕಾಶ
- ಎರಡನೇ ಮಹಡಿಯಲ್ಲಿ ವಿಶಾಲವಾದ ಸುಸಜ್ಜಿತ ಸ್ಥಳಾವಕಾಶ
- ಮೂರನೆ ಮಹಡಿಯಲ್ಲಿ ತೆರೆದ ಮೇಲ್ಛಾವಣಿ, ಉಪಹಾರ ಗೃಹ ಮತ್ತು ಮನೋರಂಜನೆ ಚಟುವಟಿಕೆಗಳಿಗೆ ಸ್ಥಳಾವಕಾಶ




**Ongoing Projects: Development of Core Markets(Old City Veg Market)**

| Sl. No | Name of the Work | Awarded Cost | Name of the Contractor |
|---|---|---|---|
| 1. | **Renovation of Old City Veg Market**<br>Work order Issued on: 06 Aug 2019 | 13.96 Cr | M/s SKS Karkala Infra Projects Pvt Ltd |
| 2. | Rehabilitation of Kattas and Shops: Old City Veg Market<br>Work Order Issued on: 23 Dec 2019 | 0.76 Cr | M/s Santosh Baburao Rokhade |

- ಉದ್ದೇಶಿತ ಕಟ್ಟಡ ನಿರ್ಮಾಣದ ಯೋಜನೆಯನ್ನು ಟೆಂಡರ ಮೂಲಕ ಆಹ್ವಾನಿಸಿ ಮೆ॥ ಎಸ್. ಕೆ. ಎಸ್ ಕಾರ್ಕಳ ಇನ್ಫ್ರಾಸ್ಟ್ರಕ್ಚರ್ ಪ್ರೊಜೆಕ್ಟ್ ಪ್ರೈ.ಲಿ., ಇವರಿಗೆ ಗುತ್ತಿಗೆಯನ್ನು ನೀಡಲಾಗಿ ಗುತ್ತಿಗೆ ಅವದಿಯನ್ನು 18 ತಿಂಗಳಿಗೆ ನಿಗದಿಪಡಿಸಿ ಮುಕ್ತಾಯಗೊಳಿಸಲು ಸೂಚಿಸಲಾಗಿರುತ್ತದೆ.
- ಸದರಿ ಕಟ್ಟಡದಲ್ಲಿ ಎರಡನೇ ಮಹಡಿಯಲ್ಲಿ ಅಂದಾಜು 924 ಚ.ಮೀ ಸ್ಥಳಾವಾಕಾಶ, ಮೂರನೇ ಮಹಡಿಯಲ್ಲಿ 640 ಚ.ಮೀ. ಸ್ಥಳಾವಕಾಶ, ಸಾರ್ವಜನಿಕ ಸಂಘ-ಸಂಸ್ಥೆಗಳಿಗೆ ಭಾಡಿಗೆಯೊಂದಿಗೆ ಲಭ್ಯವಾಗುವಂತೆ ಅವಕಾಶ ಕಲ್ಪಿಸಲಾಗಿದೆ.
- ಪ್ರಸ್ತುತ ಮಾರುಕಟ್ಟೆಯ ಪ್ರದೇಶದಲ್ಲಿ ವ್ಯಾಪಾರ ನಿರ್ವಹಿಸುತ್ತಿರುವ ವ್ಯಾಪಾರಸ್ಥರಿಗೆ ಡಾ॥ ಬಿ. ಆರ್ ಅಂಬೇಡ್ಕರ ಕ್ರೀಡಾಂಗಣ, ಹೆಗ್ಗೇರಿ ಪ್ರದೇಶದಲ್ಲಿ ತಾತ್ಕಾಲಿಕ ವ್ಯಾಪಾರಕ್ಕಾಗಿ ಮೂಲಭೂತ ಸೌಕರ್ಯ ವ್ಯವಸ್ಥೆಗಳಾದ ತರಕಾರಿ ಮಾರಾಟ ಮಾಡಲು ಕಟ್ಟೆಗಳು, ಕಿರಾಣಿ ಹಾಗೂ ದಿನಸಿ ವ್ಯಾಪಾಸ್ಥರಿಗೆ ಶಟರ್ಸ್ ಸಹಿತ ಅಂಗಡಿಗಳು, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ವ್ಯವಸ್ಥೆ ಹಾಗೂ ವ್ಯಾಪಾರಕ್ಕಾಗಿ ಬರುವ ನಾಗರೀಕರಿಗೆ ಸುಸೂತ್ರವಾಗಿ ವ್ಯಾಪಾರ ಮಾಡಲು ಸೌಕರ್ಯದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಈ ಯೋಜನೆಯನ್ನು ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಯೋಜನೆಯಲ್ಲಿ ನಾಗರೀಕರ ಅಭಿಪ್ರಾಯ ಪಡೆದು ಕಾರ್ಯಸೂಚಿಯಲ್ಲಿ ಅಳವಡಿಸಿ ಮಂಜೂರಾತಿ ಪಡೆದುಕೊಂಡು ನಾಗರೀಕರಿಗೆ ಮತ್ತು ವ್ಯಾಪಾರಸ್ಥರಿಗೆ ಉತ್ತಮ ಸೌಲಭ್ಯವನ್ನು ಕಲ್ಪಿಸಿ ಕೊಡಲಾಗುತ್ತದೆ. ಉದ್ದೇಶಿತ ಮಾರುಕಟ್ಟೆಯನ್ನು ನಿರ್ಮಿಸಲು ತಮ್ಮ ಸಂಪೂರ್ಣ ಸಹಕಾರವನ್ನು ನೀಡಲು ಈ ಮೂಲಕ ಕೋರಲಾಗಿದೆ.

(ಡಾ॥ ಸುರೇಶ. ಇಟ್ನಾಳ)
ಆಯುಕ್ತರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

(ಸಿ. ಡಬ್ಲ್ಯೂ ಶಕೀಲ್ಅಹ್ಮದ)
ವ್ಯವಸ್ಥಾಪಕ ನಿರ್ದೇಶಕರು
ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಲಿ., ಹುಬ್ಬಳ್ಳಿ